ಅ) ಈಗ ಜಾರಿಯಲ್ಲಿರುವ ಉಪಹಾರದ ವಿತರಣಾ ರೀತಿಯನ್ನು ಬದಲಾಯಿಸಿರುವುದಿಲ್ಲ. ಆದರೆ, ಕರ್ನಾಟಕ ಆಗ್ರೋ ಕಾರ್ನ್ ಸಂಸ್ಥೆಯವರು ಶಕ್ತಿಯುತ ಆಹಾರ ಮತ್ತು ಶಕ್ತಿಯುತ ಆಹಾರ ಮಿಶ್ರಣವನ್ನು ಯೋಜನೆಗಳಿಗೆ ಸಕಾಲಕ್ಕೆ ಸರಬರಾಜು ಮಾಡಲು ವಿಫಲವಾದಲ್ಲಿ ಆಹಾರ ನೀಡಿಕೆಯಲ್ಲಿ ಅಡಚಣೆಯಾಗುವುದನ್ನು ತಪ್ಪಿಸಲು ಅಂಗನವಾಡಿ ಕೇಂದ್ರಗಳಲ್ಲಿ ಅಕ್ಕಿ ಆಧಾರಿತ ಆಹಾರ ತಯಾರಿಕೆಗಳನ್ನು ಒದಗಿಸಲಾಗಿದೆ.

ಇ) ಈ ತಾತ್ಕಲಿಕ ಅಡಚಣೆಗಳು ಆಡಳಿತಾತ್ಮಕ ತೊಂದರೆಗಳಿಂದ ಉಂಟಾಗಿರುತ್ತದೆ. ಈ ಅಡಚಣೆಯನ್ನು ಸಂಬಂಧಿಸಿದವರು ತಕ್ಷಣ ಸೂಕ್ತ ರೀತಿಯಲ್ಲಿ ಬಗೆಹರಿಸಿರುತ್ತಾರೆ ಆದ್ದರಿಂದ ತನಿಖೆಗೆ ಆದೇಶ ನೀಡುವ ಅವಶ್ಯಕತೆಯಿರುವುದಿಲ್ಲ

ವಿಷಯ: ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದಲ್ಲಿ ಆಡಳಿತಾಧಿಕಾರಿಯ ಆಡಳಿತ.

2645 (3431)

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಆಡಳಿತ ಮಂಡಳಿ ವಿಸರ್ಜನೆಯಾಗಿ ಆಡಳಿತಾಧಿಕಾರಿಗಳ ಅಧೀನದಲ್ಲಿರುವುದು ನಿಜವೇ?

ಆ) ಹಾಗಿದ್ದಲ್ಲಿ ಎಷ್ಟು ಕಾಲದಿಂದ ಆಡಳಿತಾಧಿಕಾರಿಗಳು ಅಲ್ಲಿ ಆಡಳಿತ ಮಾಡುತ್ತಿದ್ದಾರೆ?

ಇ) ಸಹಕಾರಿ ಕಾಯ್ದೆಯಲ್ಲಿ ಹಾಗೂ ಸಹಕಾರಿ ತತ್ವದಲ್ಲಿ ಇದಕ್ಕೆ ಅವಕಾಶವಿದೆಯೇ ಚುನಾವಣೆ ನಡೆಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು):

ಅ) ವಿಶೇಷಾಧಿಕಾರಿ ಆಡಳಿತ ನಡೆಸುತ್ತಿದ್ದಾರೆ.

ಆ) ದಿನಾಂಕ: 22-1-1994ರಿಂದ ಆಡಳಿತ ನಡೆಸುತ್ತಿದ್ದಾರೆ.

ಇ) ಇದೆ. ಒಕ್ಕೂಟದ ಆಡಳಿತ ಮಂಡಳಿಯನ್ನು ರದ್ದು ಮಾಡಿ ವಿಶೇಷಾಧಿಕಾರಿ ಪ್ರಭಾರ ವಹಿಸಿಕೊಂಡ ಸಂದರ್ಭದಲ್ಲಿ ಇದ್ದ ನ್ಯೂನತೆಗಳಲ್ಲಿ ಕೆಲವು ನ್ಯೂನತೆಗಳನ್ನು ಸರಿಪಡಿಸಿ, ಇನ್ನುಳಿದ ನ್ಯೂನತೆಗಳನ್ನು ಸರಿಪಡಿಸಲು ಕಾಲಾವಕಾಶ ಅವಶ್ಯವಿರುವುದಾಗಿ,

ವಿಶೇಷಾಧಿಕಾರಿಯವರು ಅವರ ಅವಧಿಯನ್ನು ಮುಂದುವರಿಸಲು ಕೋರಿರುವುದನ್ನು ಗಮನಿಸಿ ಸರ್ಕಾರವು ವಿಶೇಷ ಅಧಿಕಾರಿ ಅವಧಿಯನ್ನು ದಿನಾಂಕ: 20-1-98ರವರೆಗೆ ವಿಸ್ತರಿಸಿದೆ.

ವಿಷಯ: ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಹಾನಿ.

2647 (3306)

ಶ್ರೀ ಡಿ.ಎಸ್.ಮಾದಪ್ಪ (ಮಡಕೇರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಮಳೆಗಾಳಿಯಿಂದ ಕೊಡಗು ಜಿಲ್ಲೆಯಲ್ಲಿ ಉಂಟಾದ ನಷ್ಟದ ಅಂಕಿ ಅಂಶಗಳ ವಿವರ ನೀಡುವುದು?

ಆ) ಕೊಡಗು ಜಿಲ್ಲೆಗೆ ಈ ಸಾಲಿನಲ್ಲಿ ಸರ್ಕಾರವು ಎಷ್ಟು ಹಣವನ್ನು ಮಳೆ ಹಾನಿ ಪರಿಹಾರದ ರೂಪದಲ್ಲಿ ಬಿಡುಗಡೆ ಗೊಳಿಸಿದೆ?

ಇ) ಮಳೆ ಪರಿಹಾರ ಧನವನ್ನು ಹೆಚ್ಚಿಸಲು ಸರ್ಕಾರ ಸೂಕ್ತವಾದ ಕ್ರಮ ಕೈಗೊಂಡಿದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) ಇತ್ತೀಚಿನ ಮಳೆಯಿಂದ ಕೊಡಗು ಜಿಲ್ಲೆಯಲ್ಲಿ ಆಗಿರುವ ನಷ್ಟದ ವಿವರ ಕೆಳಕಂಡಂತಿದೆ.

| | | | | |
|---|---|---|---|---|
| 1. | ಮಾನವಜೀವ ಹಾನಿ | - | 6 | (ವಿದ್ಯುತ್ ಷಾಕ್‌ನಿಂದ) |
| 2. | ಜಾನುವಾರು ಹಾನಿ | - | 1 | |
| 3. | ಮೊನೆ ಕುಸಿತ | - | | |
| | ಪೂರ್ಣ | - | 104 | |
| | ಭಾಗಶಃ | - | 127 | |
| 4. | ಕೃಷಿ ಬೆಳೆ ಹಾನಿ | | 2700 | ಎಕರೆ |
| 5. | ರಸ್ತೆಗಳು | | 290 | |
| 6. | ಸೇತುವೆಗಳು | | 35 | |